ಲೋಕಧ್ವನಿ
ಬುಧವಾರ
19 ಏಪ್ರಿಲ್ 2017

# ಗ್ರಾಮೀಣ ಸಂತೆ: ಕಾಗೇರಿಯಿಂದ ಅಡಿಗಲ್ಲು



ಶಿರಸಿ, ಏ.18: ತಾಲೂಕಿನ ಕರ್ಜಗಿಯ ಮನುವಿಕಾಸ ಸಂಸ್ಥೆಯು ಕಳೆದ 12 ವರ್ಷಗಳಿಂದ ಉತ್ತರ ಕನ್ನಡ ಮತ್ತು ಹಾವೇರಿ ಜಿಲ್ಲೆಗಳಲ್ಲಿ ವಿನೂತನ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದೆ. ಜನರಿಗೆ ನೀರಿನ ಬರ ಕುರಿತು ಅನುಭವಕ್ಕೆ ಬರುವ ಮುಂಚೆಯೇ ಮನುವಿಕಾಸ ಸಂಸ್ಥೆ ಕೃಷಿ ಹೊಂಡ, ಸಣ್ಣ ಕೆರೆ ಮತ್ತು ಇಂಗು ಗುಂಡಿಗಳನ್ನು ನಿರ್ಮಿಸಿದೆ. ಇದಲ್ಲದೆ ಬಡ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪ್ರೋತ್ಸಾಹ ನೀಡುವುದರೊಂದಿಗೆ ಮಹಿಳಾ ಸಬಲೀಕರಣಕ್ಕೂ ಸಹಕಾರ ನೀಡುತ್ತಿದೆ. ಸದ್ಯ ನಬಾರ್ಡ್ ನೆರವಿನಲ್ಲಿ ಬಾಳೆಗದ್ದೆಯಲ್ಲಿ ಗ್ರಾಮೀಣ ಸಂತೆ ನಿರ್ಮಿಸುತ್ತಿರುವುದು ಸಂಸ್ಥೆಯ ವಿನೂತನ ಕಾರ್ಯಕ್ರಮಕ್ಕೆ ಇದೊಂದು ಸೇರ್ಪಡೆ ಆದಂತೆ ಎಂದು ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

ತಾಲೂಕಿನ ಬಾಳೆಗದ್ದೆಯಲ್ಲಿ ಮನುವಿಕಾಸ ಸಂಸ್ಥೆಯಿಂದ ನಿರ್ಮಿಸುತ್ತಿರುವ ಗ್ರಾಮೀಣ ಸಂತೆ ಸಮಾರಂಭ ಅಡಿಗಲ್ಲು ನೆರವೇರಿಸಿ ಮಾತನಾಡಿ, ಗ್ರಾಮೀಣ ಸಂತೆಗೆ ಉಚಿತ ಸ್ಥಳದಾನ ನೀಡಿದ ಅನಂತ ಶಿವರಾಮ ಹೆಗಡೆ ಅವರನ್ನು ಅಭಿನಂದಿಸಿದರು.

ಪ್ರಾಸ್ತಾವಿಕವಾಗಿ ಮನುವಿಕಾಸ ಸಂಸ್ಥೆ ನಿರ್ದೇಶಕ ಗಣಪತಿ ಭಟ್ಟ ಮಾತನಾಡಿ, ಸೂರು ರಹಿತ ವ್ಯಾಪಾರಸ್ಥರಿಗೆ ಮನುವಿಕಾಸ ಸಂಸ್ಥೆಯಿಂದ ನಬಾರ್ಡ್ ಸಹಾಯದಲ್ಲಿ ಗ್ರಾಮೀಣ ಸಂತೆ ಪ್ರಾರಂಭಿಸಲಾಗುತ್ತಿದೆ. ಬಾಳೆಗದ್ದೆಯ ಗ್ರಾಮೀಣ ಸಂತೆ ಶಿರಸಿ– ಹುಲೇಕಲ್ ರಸ್ತೆಯಲ್ಲಿ ಪ್ರಯಾಣಿಸುವ ಎಲ್ಲ ಹಳ್ಳಿಗರಿಗೆ ಅನುಕೂಲವಾಗಲಿದೆ. ಸಂಸ್ಥೆಯಿಂದ ಇತ್ತೀಚೆಗೆ ಪ್ರಾರಂಭವಾಗಿರುವ ಪ್ರಗತಿಮಿತ್ರ ಒಕ್ಕಲುತನ ಹುಟ್ಟುವಳಿದಾರರ ಕಂಪನಿಯಿಂದ ನಡೆಯುವ ಅಡಿಕೆ ಮತ್ತಿತರ ಕೃಷಿ ಉತ್ಪನ್ನಗಳ ವ್ಯಾಪಾರ ಮತ್ತು ಟೆಂಡರ್ ಪ್ರಕ್ರಿಯೆಗೆ ಗ್ರಾಮೀಣ ಸಂತೆಯಿಂದ ಉಪಯೋಗವಾಗಲಿದೆ ಎಂದರು.

ಮುಖ್ಯ ಅತಿಥಿಗಳಾಗಿದ್ದ ನಬಾರ್ಡ್ ಡಿ.ಡಿ.ಎಮ್. ಎಸ್.ಎಲ್.ಯೋಗೀಶ ಮಾತನಾಡಿ, ಮನುವಿಕಾಸ ಸಂಸ್ಥೆ ಜಿಲ್ಲೆಯಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಉತ್ತಮ ಕೆಲಸ ನಿರ್ವಹಿಸುತ್ತಿದೆ. ಇದನ್ನು ಗುರುತಿಸಿ ಬಾಳೆಗದ್ದೆಯಲ್ಲಿ ಗ್ರಾಮೀಣ ಸಂತೆ ನಿರ್ಮಿಸಲು ನಬಾರ್ಡ್‌ನಿಂದ ಆರ್ಥಿಕ ಸಹಕಾರ ಮಂಜೂರಿ ನೀಡಲಾಗಿದೆ. ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಇದರಲ್ಲಿ ಭಾಗವಹಿಸಿ ಗ್ರಾಮೀಣ ಸಂತೆಯ ಪ್ರಯೋಜನ ಪಡೆಯಬೇಕೆಂದರು.

ವೇದಿಕೆಯಲ್ಲಿ ಮನುವಿಕಾಸ ಸಂಸ್ಥೆಯ ಅಧ್ಯಕ್ಷ ಹರಿಶ್ಚಂದ್ರ ಭಟ್ಟ, ಸ್ಥಳ ದಾನಿ ಅನಂತ ಹೆಗಡೆ ಬಾಳೆಗದ್ದೆ ಉಪಸ್ಥಿತರಿದ್ದರು. ಹುಲೇಕಲ್ ಗ್ರಾಮ ಪಂಚಾಯತ ಅಧ್ಯಕ್ಷೆ ಶ್ರೀಮತಿ ಗೀತಾ ಆರ್.ಭೋವಿ ಅಧ್ಯಕ್ಷತೆ ವಹಿಸಿದ್ದರು.

ಮನುವಿಕಾಸ ಸಂಸ್ಥೆಯ ಸಿಬ್ಬಂದಿ ಶ್ರೀಮತಿ ಶುಭಾ ಪೈ ಪ್ರಾರ್ಥಿಸಿದರು. ಗಣಪತಿ ಭಟ್ಟ ಸ್ವಾಗತಿಸಿದರು. ವಿವೇಕ ಹೆಗಡೆ ವಂದಿಸಿದರು.